ದಿನಾಂಕ **31-01-2024** ರಂದು ಸಾಕ್ಷಿಗೆ ಪ್ರಮಾಣ ವಚನ ಭೋದಿಸಲಾಯಿತು.

**ಮುಂದುವರೆದ ಪಾಟೀಸವಾಲುಃ ಶ್ರೀ. ವಿ.ವಿ.ಆರ್. ವಾದಿ ಪರ ವಕೀಲರಿಂದಃ-**

1. ನನ್ನ ಮುಖ್ಯ ವಿಚಾರಣೆಯಲ್ಲಿ ನಾನು ಅಸಲು ದಾವಾ ಸಂಖ್ಯೆ -84/2000 ರಲ್ಲಿ ನಡೆದ ದಾವೆಯ ವಿಚಾರವನ್ನು ಹೇಳಿಲ್ಲ. ಆ ವಿಚಾರ ನಾನು ತಿಳಿದುಕೊಂಡಿರುತ್ತೇನೆ. ಆ ದಾವೆಯನ್ನು ದಾಸಮ್ಮ ರವರು ನನ್ನ ತಂದೆಯ ವಿರುದ್ಧ ಹೂಡಿದ್ದರು. ಏನು ಪರಿಹಾರ ಕೋರಿ ದಾವೆ ಸಲ್ಲಿಸಿದ್ದರು ಎಂಬುದು ನನಗೆ ಹೇಳಲಾಗುವುದಿಲ್ಲ. ಆ ದಾವೆ ಏನಾಗಿರುತ್ತದೆ ಎಂಬುದು ನನಗೆ ಗೊತ್ತು . ಆ ದಾವೆ ನಮ್ಮ ಪರವಾಗಿ ಆಗಿರುತ್ತದೆ. ಆ ದಾವೆಯಲ್ಲಿ ನಮ್ಮ ಪರವಾಗಿ ಮುನಿರೆಡ್ಡಿ ವಕೀಲರು ಇದ್ದರು. ವಾದಿಗಳ ಪರವಾಗಿ ಶ್ರೀನಾಥ್ ವಕೀಲರು ಇದ್ದರು.

2. ಆ ದಾವೆಯಲ್ಲಿ ವಾದಿಗಳು ಚೆನ್ನಪ್ಪ ಮತ್ತು ದಾಸಮ್ಮ ಎಂದರೆ ಸರಿ. ಚೆನ್ನಪ್ಪನ ತಾಯಿಯೇ ದಾಸಮ್ಮ ಎಂದರೆ ಸರಿ. ಲಕ್ಷ್ಮೀದೇವಮ್ಮ ಮತ್ತು ಆಂಜನಮ್ಮ ರವರು ತಾಯಿ ದಾಸಮ್ಮ ಎಂದರೆ ಸರಿ. ಆ ದಾವೆಯಲ್ಲಿ ನಾನು ಏನು ತಕರಾರು ಸಲ್ಲಿಸಿರುತ್ತೇನೆ ಎಂಬುದು ನನಗೆ ಗೊತ್ತಿಲ್ಲ. ನಿಮಗೆ ಗೊತ್ತಿದ್ದರೂ ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ. ಆ ದಾವೆಯ ಮೇಲೆ ಸಲ್ಲಿಸಿದ ಮೇಲ್ಮನವಿ ಈಗ ನಡೆಯುತ್ತಿದೆ ಎಂದರೆ ಸಾಕ್ಷಿಯು ಇಲ್ಲ ನಮ್ಮ ಪರವಾಗಿ ಆಗಿದೆ ಎನ್ನುತ್ತಾರೆ. ನಿಮ್ಮ ಪರವಾಗಿ ಆಗಿಲ್ಲ ಎಂದರೆ ಸರಿಯಲ್ಲ.

3. ಕೋಳಿ ಫಾರಂ ನ್ನು 10 ಲಕ್ಷ ಖರ್ಚು ಮಾಡಿ 15 ವರ್ಷಗಳ ಹಿಂದೆ ನಾನೇ ಹಾಕಿರುತ್ತೇನೆ. ಕೋಳಿ ಫಾರಂ ಗೆ ಸಂಬಂಧಿಸಿದಂತೆ ದಾಖಲಾತಿಯನ್ನು ಈ ದಾವೆಯಲ್ಲಿ ಕೊಟ್ಟಿಲ್ಲ. ಮನೆಯನ್ನು ಯಾವ ಆಸ್ತಿಯಲ್ಲಿ ಕಟ್ಟಿರುತ್ತೀರಿ ಎಂದರೆ ಸಾಕ್ಷಿಯು ಮನೆ ಕಟ್ಟಿಲ್ಲ ಕೋಳಿ ಫಾರಂ ಕಟ್ಟಿರುತ್ತೇನೆ ಎನ್ನುತ್ತಾರೆ. ದಾಸಮ್ಮನಿಗೆ ಯಾವುದೇ ಸ್ತ್ರೀಧನ ಆಸ್ತಿ ಇರಲಿಲ್ಲ ಎಂದರೆ ಸರಿಯಲ್ಲ.

4. ಹೆಚ್ .ಎಂ. ಮುನಿಯಪ್ಪ ರವರಿಗೆ ಚೆನ್ನಪ್ಪ ಮತ್ತು ದಾಸಮ್ಮ ರವರು ದಿಃ 03-06-1991 ರಲ್ಲಿ ಯಾವುದೇ ದಾಖಲೆಯನ್ನು ಮಾಡಿಕೊಟ್ಟಿಲ್ಲ ಎಂದರೆ ಸರಿಯಲ್ಲ. ಚೆನ್ನಪ್ಪ ರವರು ಬೆಂಗಳೂರಿನಲ್ಲಿ ಆಸ್ತಿ ಖರೀದಿಸಿರುತ್ತಾರೆ ಎಂದು ಹೇಳಿರುತ್ತೀರಾ ಎಂದರೆ ಸಾಕ್ಷಿಯು ನಮಗೆ ಮಾರಿದಾಗ ಅವರು ತೆಗೆದುಕೊಂಡಿರುತ್ತಾರೆ ಎನ್ನುತ್ತಾರೆ. ಇದಕ್ಕೆ ಸಂಬಂಧವಾಗಿ ದಾಖಲಾತಿಗಳು ಇವೆಯೇ ಎಂದರೆ ಸಾಕ್ಷಿಯು ಅವರು ತೆಗೆದುಕೊಳ್ಳುತ್ತೇನೆಂದು ಹೇಳಿದ್ದರು ಎನ್ನುತ್ತಾರೆ.

5. ದಾವಾ ಆಸ್ತಿಗಳು ದಾಸಮ್ಮಳ ಸ್ವಯಾರ್ಜಿತ ಆಸ್ತಿಗಳು , ನಮಗೆ ದಾಖಲಾತಿ ಬರೆದುಕೊಳ್ಳುವ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ.

6. ಸರ್ವೆ ನಂ.1 ಆದಿನಾರಾಯಣರವರ ಹೆಸರಿಗೆ 10 ವರ್ಷದಿಂದ ಬರುತ್ತಿದೆ ಎನ್ನುತ್ತಾರೆ. ನಿಮಗೆ ಹೇಗೆ ಗೊತ್ತಾಯಿತು ಎಂದರೆ ಸಾಕ್ಷಿಯು ನನ್ನ ತಂದೆ ಆಸ್ತಿಯನ್ನು ಖರೀದಿ ಮಾಡಿದ್ದು ಹೆಣ್ಣು ಮಗಳಿಗೋಸ್ಕರ ಎನ್ನುತ್ತಾರೆ.

7. ಲಕ್ಷ್ಮೀದೇವಮ್ಮ ಮತ್ತು ಆಂಜಮ್ಮ ರವರು ದಾವೆ ಹೂಡುತ್ತಾರೆ ಎಂಬುದನ್ನು ತಿಳಿದು ನೀವು ದಾವಾ ಆಸ್ತಿಯನ್ನು ಆದಿನರಾಯಣರವರ ಹೆಸರಿಗೆ ಮಾಡಿರುತ್ತೀರಿ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮುಂಚಿತವಾಗಿ ಮಾಡಿದ್ದೇವು ಎನ್ನುತ್ತಾರೆ. ನೀವು ಆಸ್ತಿಯನ್ನು ವರ್ಗಾವಣೆ ಮಾಡಿದಾಗ ಅಸಲುದಾವಾ ಸಂಖ್ಯೆ 84/2000 ನಡೆಯುತ್ತಿತ್ತು ಎಂದರೆ ಸರಿ. ಅವರಿಗೆ 2014 ರಲ್ಲಿ ಈ ವಿಚಾರ ಗೊತ್ತಾಯಿತು ಆದ್ದರಿಂದ ಈ ದಾವೆ ಹೂಡಿರುತ್ತಾರೆ ಎಂದರೆ ಸರಿಯಲ್ಲ. ಚೆನ್ನಪ್ಪನಿಗೆ ಮತ್ತು ದಾಸಮ್ಮಳಿಗೆ ಯಾವುದೇ ಪ್ರತ್ಯೇಕ ಅಧಿಕಾರ ಇಲ್ಲ ಎಂದರೆ ಸರಿಯಲ್ಲ.

8. ನೀವು ದಾಖಲಾತಿಗಳನ್ನು ಸೃಷ್ಟಿಸಿಕೊಂಡು ಬಂದು ನ್ಯಾಯಾಲಯಕ್ಕೆ ಕೊಟ್ಟಿರುತ್ತೀರಿ ಎಂದರೆ ಸರಿಯಲ್ಲ. ಚೆನ್ನಪ್ಪನ ಮಕ್ಕಳು ಆಸ್ತಿಯಲ್ಲಿ ಜಂಟಿ ಸ್ವಾಧೀನದಲ್ಲಿರುತ್ತಾರೆ

ಎಂದರೆ ಸಾಕ್ಷಿಯು ಅವರು ಊರಿನಲ್ಲಿಯೇ ಇಲ್ಲ ಎನ್ನುತ್ತಾರೆ. ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಈ ಹಂತದಲ್ಲಿ ವಾದಿ ಪರ ವಕೀಲರು 6 ನೇ ಪ್ರತಿವಾದಿ ಪರ ವಕೀಲರು ದಿಃ 03-04-2021 ರಂದು ಮಾಡಿದ ಪಾಟೀಸವಾಲನ್ನು ಅಳವಡಿಸಿಕೊಳ್ಳಲು ಕೋರಿದ್ದು , ಅಳವಡಿಸಿಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಃ-**

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿಯ ಹೇಳಿಕೆಯನ್ನು ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸ ಇದೆ.**

ಅಪರ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ., ಚಿಂತಾಮಣಿ.